HITACHI

August 08, 2026

The Secretary,
Listing Department,
BSE Limited,
1st Floor, Phiroze Jeejeebhoy Towers,
Dalal Street,
Mumbai - 400 001
Scrip Code: 543187

The Manager,
Listing Department,
National Stock Exchange of India Limited,
'Exchange Plaza', 5th Floor, Plot No. C/1, G Block,
Bandra Kurla Complex, Bandra (East),
Mumbai - 400 051
Scrip Symbol: POWERINDIA

Subject: Newspaper publication of Unaudited Financial Results

Dear Sir / Madam,

We are enclosing herewith the extracts of the unaudited financial results of the Company for the first quarter ended June 30, 2026, as approved by the Board of Directors at their Meeting held on Friday, August 07, 2026 and published today i.e., on Saturday, August 08, 2026 in "The Hindu Business Line" (English Newspaper) and "Vijaya Karnataka" (Kannada Newspaper). The same is also being made available on the website of the Company at:
https://www.hitachienergy.com/in/en/investor-relations/communications-to-stock-exchange.

This is pursuant to Regulation 47 of the SEBI (Listing Obligations and Disclosure Requirements) Regulations, 2015, as amended.

Kindly take the same on your records.

Thank you,

Yours faithfully,

For Hitachi Energy India Limited
AMMATANDA
CHINNAPPA
POOVANNA
Digitally signed by AMMATANDA CHINNAPPA POOVANNA
Date: 2026.08.08 17:14:29 +05'30'
Poovanna Ammatanda
General Counsel and Company Secretary

Encl.: as above

QUICKLY.

First MD & CEO of IIBX in GIFT City steps down

Ahmedabad: Ashok Kumar Gautam, the first MD and CEO of India International Bullion Exchange IFSC Ltd (IIBX), has resigned after leading the country's first international bullion exchange at GIFT City for more than four years. Gautam, who cited personal reasons for stepping down, is currently serving a three-month notice period, sources aware of the development told *businessline*. He joined IIBX in February 2022, ahead of the exchange's launch by Prime Minister Narendra Modi in July that year. During his tenure, he led the operational rollout of the exchange and helped establish the ecosystem for international bullion trading from GIFT City. Gautam did not respond to calls or messages. OUR BUREAU

SC to examine DPDP law impact on RTI, investigative journalism

EQUAL STATUS. The Supreme Court said both the DPDP Act and the RTI Act are Central legislation

Krishnadas Rajagopal
New Delhi

The Supreme Court on Friday agreed to examine whether the Digital Personal Data Protection (DPDP) Act of 2023 can be used to cripple the Right to Information (RTI) Act by classifying all data as 'personal' and separately to gag investigative journalists.

PRIVACY CONCERN. The Supreme Court heard petitions challenging Section 44(3) of the DPDP Act, which amends the RTI Act to deny personal information PTI

The court said both DPDP Act and the RTI Act are Central legislation. There is a need to actually harmonise them. "The earlier law (RTI Act, 2005) gave certain access with conditions. Here [2023 Act], there is an en bloc embargo. Is this latter law repugnant to earlier law? This has to be looked into with extreme circumspection. After all, both are central laws. There is a need to actually harmonise these two," Justice Joymalya Bagchi said.

He added the RTI law operated on a "much larger domain" than the DPDP Act as DPDP law was only concerned with data in digital form. The court said this even while acknowledging that data was now overwhelmingly in the digital format. He also said the court would examine if this restrictive or 'cautionary approach' to sharing data under the DPDP Act worked to repeal earlier transparency legislation.

The court was hearing multiple petitions challenging provisions of the DPDP Act, primarily Section 44(3), which amended the RTI Act to facilitate public authorities to blankly refuse information on the ground that the details sought was of a 'personal' nature.

RTI DISCLOSURES

The petitioners, represented by advocate Vrinda Grover, argued that the provision had turned the fundamental right to privacy on its head. The right, meant to protect ordinary citizens against state incursion, had been extended to protect the state and public functionaries from RTI disclosures.

They argued that Section 44(3) of the DPDP Act amended Section 8(1)(j) of the RTI Act. Originally, the RTI provision exempted authorities from disclosing personal information to an applicant if the details sought had no relationship to any public activity or if disclosure would amount to unwarranted invasion of privacy. Even then, the government had to disclose if public interest outweighed privacy. The decision whether or not to reveal "personal information" was taken by a Public Information Officer or the First Appellate Authority under the RTI Act after weighing privacy and transparency concerns.

One of the petitioners, Foundation for Media Professionals, represented by advocate Nisha Bhambhani, said the 2023 Act could have a grave impact on investigative journalism. "The Act was not granting exemption to journalists. If a journalist is reporting, they would have to seek the consent of the data principal. If the data principal wants to erase the data, they can do it. This has a direct effect on investigative journalism," the counsel submitted.

FSSAI slaps fine on AWL Agri Business for 'substandard' oil

Meenakshi Verma Ambwani
New Delhi

The Food Safety and Standards Authority of India (FSSAI) on Friday said it has imposed a penalty and passed an adjudication order on AWL Agri Business Ltd for manufacturing and marketing substandard fortified edible oil under the provisions of the FSS Act, 2006.

It said that Vitamin A and Vitamin D levels were below the prescribed levels in a sample of Fortune Fryola refined sunflower seed oil.

It said the order was passed by the Adjudicating Officer, Goa, but did not specify the penalty amount.

A sample of the product, which was collected by the FSSAI from Taj Fort Aguada Resort & Spa, Goa, did not conform to the standards prescribed under the FSS (Fortification of Foods) Regulations, 2018, as per the test report of the primary food lab, it said in a post.

"The levels of Vitamin A and Vitamin D were below the prescribed limits, thereby declaring the product substandard under Section 3(1)(zx) of the Food Safety and Standards Act, 2006," said FSSAI.

BRAND APPEALS

After the brand's appeal, the sample was further analysed by the referral laboratory, and it was confirmed that Vitamin D content was significantly below the prescribed range, affirming that the product was substandard.

"The Adjudicating Officer, Goa, passed the adjudication order and imposed a penalty on AWL Agri Business Ltd for manufacturing and marketing a substandard fortified edible oil under the provisions of the FSS Act, 2006," said FSSAI.

"We have not yet received a certified copy of the order. Based on the information available to us, the matter relates to fortification levels, specifically of Vitamin D, in the said sample. This is not a product safety concern, and the said sample was entirely safe for consumption. It may be noted that added vitamins are inherently sensitive to storage conditions, light and time," said AWL Agri Business.

"We are reviewing the order and will pursue appropriate legal remedies. We reiterate that we remain fully committed to FSSAI norms," the company added.

PIE FOODS IN THE DOCK

Meanwhile, the food safety regulator has also directed Pie Foods to stop the sale of Monk Fruit Extract Sweetener and Monk Fruit Sweetener Drops until a valid FSSAI Central Licence with the requisite endorsements is obtained, and the necessary approval for the non-specified food ingredient (Monk Fruit Extract) is secured in accordance with the provisions of the FSS Act, 2006.

Delhi HC stays FSSAI's prohibition of sale order on Dabur

Our Bureau
New Delhi

In relief for Dabur India, the Delhi High Court on Friday stayed an order of the Food Safety and Standards Authority of India (FSSAI), which prohibited the FMCG major from selling food products such as honey, cow ghee and edible oils that have 100 per cent claims on their labels.

Justice Amit Mahajan observed that Dabur was selling the products for decades and had made out a *prima facie* case for relief at this stage.

"The court is *prima facie* of the opinion that the prohibitory order ought not to have been passed without giving an opportunity of hearing. Till the next date of hearing, the impugned order is stayed," the court observed.

It also issued notice to the FSSAI on Dabur's petition challenging the prohibition, and asked it to file a reply before the next date of hearing.

In a social media post on Monday, the FSSAI said it had issued the prohibition order to Dabur India Ltd over the sales of food products carrying "misleading 100 per cent" claims, including honey, apple cider vinegar, virgin coconut oil, sesame oil, cow ghee, coconut water, coconut milk and other such items.

SHOW-CAUSE NOTICE

The FMCG major argued that the FSSAI order was passed without issuing any show-cause notice or providing it an opportunity for hearing.

In an earlier post, FSSAI had said, "FSSAI found products being sold on the company's website were found carrying misleading 100 per cent claims such as 100 per cent natural, 100 per cent pure, 100 per cent purity guaranteed, 100 per cent organic and 100 per cent tender coconut water".

"FSSAI directed Dabur India Ltd to immediately prohibit the sale of the food products identified in the notice and all other food products carrying misleading '100 per cent' claims, and to submit an action taken report within 15 days," the regulator stated.

Oil India Q1 profit nearly doubles to ₹4,027 cr

Our Bureau
New Delhi

State-run Oil India (OIL) on Friday reported a consolidated net profit of around ₹4,027 crore in Q1FY27, a growth of 97 per cent y-o-y, aided by higher crude oil production as well as robust profits declared by its subsidiary Numaligarh Refinery (NRL).

On a sequential basis, the consolidated net profit of the exploration & production (E&P) company rose by more than 66 per cent. OIL's consolidated total income was higher at around ₹13,236 crore in Q1FY27, compared to ₹10,515 crore in Q4FY26 and ₹9,006 crore in Q1FY26.

Its consolidated total expenses were also higher at ₹8,094 crore in Q1FY27, up from ₹7,812 crore in Q4FY26 and ₹17,225 crore in Q1FY26.

ROBUST GROWTH

In its efforts to ensure the nation's energy security, OIL said it produced 0.950 million tonnes (mt) of crude oil from its mature oilfields in Q1FY27, up from 0.853 mt in Q1FY26.

On June 27, OIL achieved its highest-ever daily crude oil production of 10,921 tonnes (or 84,109 barrels).

"OIL's material subsidiary NRL achieved a robust 167 per cent growth in profit after tax (PAT), rising to ₹1,305 crore in Q1FY27 from ₹488 crore in Q1FY26 with a gross refinery margin of $35.95 per barrel vis-à-vis $5.02 and distillate yield of 87.58 per cent vis-à-vis 85.38 per cent," it added in a statement.

EXPLORATORY WELL

During the quarter under review, the firm reported the discovery of natural gas in the Vijaya Puram-3 exploratory well in the Andaman Basin, reaffirming the basin's hydrocarbon potential.

Further, the company completed a highly deviated exploratory well, achieving the highest-ever horizontal displacement of 3,116 meters in an onshore well in Assam.

ಪದವಿ ವಿದ್ಯಾರ್ಥಿಗಳಿಗೆ ಕೌಶಲ ತರಬೇತಿ

ಆತ್ಮಸ್ಥೈರ್ಯ ತುಂಬಲು ವಿಶೇಷ ಕಾರ್ಯಕ್ರಮ | ಸಂವಹನ, ಡಿಜಿಟಲ್ ಕೌಶಲ ಸೇರಿ ಹಲವು ವಿಷಯಗಳ ತರಬೇತಿ

■ **ಶಾಂತಮೂರ್ತಿ** ಬೆಂಗಳೂರು
shantha.a@timesofindia.com

ಉದ್ಯಮ ಕ್ಷೇತ್ರದ ಬದಲಾವಣೆಗೆ ತಕ್ಕಂತೆ ವಿದ್ಯಾರ್ಥಿಗಳಿಗೆ ಪದವಿ ಆರಂಭದಲ್ಲೇ ಆತ್ಮವಿಶ್ವಾಸ ತುಂಬಲು ಮುಂದಾಗಿರುವ ಕಾಲೇಜು ಶಿಕ್ಷಣ ಇಲಾಖೆ, 'ಹೊಸ ದಿಗಂತ-ಪದವಿ ಶಿಕ್ಷಣಕ್ಕೆ ಆತ್ಮವಿಶ್ವಾಸದ ಆರಂಭ' ಎಂಬ ವಿಶೇಷ ಕಾರ್ಯಕ್ರಮದ ಮೂಲಕ ವಿದ್ಯಾರ್ಥಿಗಳಿಗೆ ಸ್ಥೈರ್ಯ ನೀಡಲು ಸಜ್ಜಾಗಿದೆ.

ಪದವಿ ವಿದ್ಯಾರ್ಥಿಗಳಿಗೆ ಇಲಾಖೆಯಿಂದ ಸಿಗುವ ಸೌಲಭ್ಯಗಳ ಮಾಹಿತಿ ನೀಡುವ ಜತೆಗೆ, ಕೌಶಲಗಳ ಕಲಿಕೆಗೆ ಅವಕಾಶ ನೀಡಲು ಹೊರಟಿದೆ. ರಾಜ್ಯದ ಸರಕಾರಿ ಪದವಿ ಕಾಲೇಜುಗಳಲ್ಲಿನ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸಂವಹನ ಕೌಶಲ, ಡಿಜಿಟಲ್ ಕೌಶಲ, 21ನೇ ಶತಮಾನದಲ್ಲಿ ಅವಶ್ಯಕವಿರುವ ಕೌಶಲಗಳು, ಭವಿಷ್ಯದ ಗುರಿ ಎಂಬ ಸುಮಾರು 12 ವಿಷಯಗಳ ಬಗ್ಗೆ ತರಬೇತಿ ನೀಡಲಿದ್ದು, ಈ ಮೂಲಕ ವಿದ್ಯಾರ್ಥಿಗಳನ್ನು ಭವಿಷ್ಯದ ಉದ್ಯಮ ಕ್ಷೇತ್ರಕ್ಕೆ ಅರ್ಹರನ್ನಾಗಿಸಲು ಯೋಜನೆ ರೂಪಿಸಲಾಗಿದೆ. ಎನ್‌ಜಿಒವೊಂದರ ಸಹಯೋಗದಲ್ಲಿ ಈ ವಿಶೇಷ ಕಾರ್ಯಕ್ರಮ ಆರಂಭಿಸಲು ಹೊರಟಿರುವ ಕಾಲೇಜು ಶಿಕ್ಷಣ ಇಲಾಖೆ, ಪದವಿ ಹಂತಕ್ಕೆ ಆಗ ತಾನೇ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸ ಬೆಳೆಸುವ ಜತೆಗೆ, ಆರಂಭದಿಂದಲೇ ಕೌಶಲಗಳನ್ನು ಕಲಿಸುವ ಗುರಿ ಹೊಂದಿದೆ.

ಹೇಗಿರಲಿದೆ ತರಬೇತಿ?

'ಹೊಸ ದಿಗಂತ' ಕುರಿತು ದೇಶಪಾಂಡೆ ಎಜುಕೇಷನಲ್ ಟ್ರಸ್ಟ್ ಸಹಯೋಗದಲ್ಲಿ ಕಾರ್ಯಕ್ರಮ ರೂಪಿಸಲಾಗಿದೆ. ಒಟ್ಟು 12 ಸೆಷನ್‌ಗಳಲ್ಲಿ ತರಬೇತಿ ನಡೆಯಲಿದ್ದು, ವಿದ್ಯಾರ್ಥಿಗಳಿಗೆ ಭವಿಷ್ಯದ ಉದ್ಯೋಗಕ್ಕೆ ಸಜ್ಜಾಗಲು ಬೇಕಾದ ಕೌಶಲಗಳ ಬಗ್ಗೆ ಮಾರ್ಗದರ್ಶನ ಸಿಗಲಿದೆ. 6 ದಿನಗಳ ಅವಧಿಯಲ್ಲಿ ಇಲಾಖೆ ಸೂಚಿಸಿರುವ ಆರು ಘಟಕಗಳ ಪ್ರಕಾರ ತರಬೇತಿ ಪಡೆದ ಪ್ರಾಂಶುಪಾಲರು ಹಾಗೂ ಪ್ರಾಧ್ಯಾಪಕರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಲಿದ್ದಾರೆ. ಇಲಾಖೆಯಿಂದ ಒದಗಿಸಲಾಗುವ ಅಭ್ಯಾಸ ಪುಸ್ತಕದ ಸಹಾಯದಿಂದ ವಿದ್ಯಾರ್ಥಿಗಳು ಮೂಲಭೂತ ಕೌಶಲಗಳನ್ನು ಕಲಿಯಲಿದ್ದಾರೆ.

ಉಪಯೋಗಗಳೇನು?

- ವಿದ್ಯಾರ್ಥಿಗಳಿಗೆ ಕೌಶಲಗಳ ಕಲಿಕೆಗೆ ಅವಕಾಶ
- ಭಯದ ವಾತಾವರಣ ಹೋಗಲಾಡಿಸಿ ಆತ್ಮವಿಶ್ವಾಸ ಸೃಷ್ಟಿ
- ಭವಿಷ್ಯದ ಉದ್ಯೋಗಾವಕಾಶಗಳಿಗೆ ಸಜ್ಜಾಗಲು ಅವಕಾಶ
- ಮುಂದಿನ ಗುರಿ, ತಯಾರಿ ಬಗ್ಗೆ ಸೂಕ್ತ ಮಾರ್ಗದರ್ಶನ

ಪದವಿಗೆ ಸೇರುವ ವಿದ್ಯಾರ್ಥಿಗಳಿಗೆ ಆರಂಭದಿಂದಲೇ ಭದ್ರ ಅಡಿಪಾಯ ಹಾಕಿಕೊಡಲು ಈ ಕಾರ್ಯಕ್ರಮ ರೂಪಿಸಲಾಗಿದೆ. ವಿದ್ಯಾರ್ಥಿಗಳು ತಂತ್ರಜ್ಞಾನದ ಯುಗಕ್ಕೆ ಅಗತ್ಯವಿರುವ ಕೌಶಲಗಳನ್ನು ಕಲಿಯುವ ಜತೆಗೆ, ಸೂಕ್ತ ಮಾರ್ಗದರ್ಶನ ಪಡೆಯಲಿದ್ದಾರೆ
-ಪ್ರೊ.ಶೋಭಾ ಜಿ.
ನಿರ್ದೇಶಕಿ, ಕಾಲೇಜು ಶಿಕ್ಷಣ ಇಲಾಖೆ

ವಿದ್ಯಾರ್ಥಿಗಳಿಗೆ ಚಟುವಟಿಕೆ, ಸಂವಾದಗಳ ಮೂಲಕ ಅಗತ್ಯ ಕೌಶಲಗಳನ್ನು ಈ ಕಾರ್ಯಕ್ರಮದ ಮೂಲಕ ಒದಗಿಸಲಿದ್ದು, ಭವಿಷ್ಯದಲ್ಲಿ ಉದ್ಯೋಗ ಅರಸಿ ಹೊರಟಾಗ ಎದುರಾಗುವ ಸವಾಲುಗಳು, ಉದ್ಯಮದಾರರು ಬಯಸುವ ಕೌಶಲಗಳ ಬಗ್ಗೆ ತಜ್ಞರು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲಿದ್ದಾರೆ. ಜತೆಗೆ, ಕಾಲೇಜು ಶಿಕ್ಷಣ ಇಲಾಖೆಯಿಂದ ನೀಡಲಾಗುವ ವಿದ್ಯಾರ್ಥಿವೇತನ, ಇತರೆ ಸವಲತ್ತುಗಳನ್ನು ಸದುಪಯೋಗಪಡಿಸಿಕೊಳ್ಳುವುದು ಹೇಗೆ ಎಂಬ ಬಗ್ಗೆ ಮಾರ್ಗದರ್ಶನ ಸಿಗಲಿದೆ.

2026-27ನೇ ಸಾಲಿನಿಂದಲೇ ಈ ಕಾರ್ಯಕ್ರಮ ಅನುಷ್ಠಾನಕ್ಕೆ ಇಲಾಖೆ ಸಜ್ಜಾಗಿದ್ದು, ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಓರಿಯೆಂಟೇಷನ್ ಆರಂಭವಾಗುವ ಸಮಯದಿಂದಲೇ ಈ ವಿಶೇಷ ಕಾರ್ಯಕ್ರಮ ಜಾರಿಗೊಳಿಸಲು ಇಲಾಖೆ ಸಿದ್ಧತೆ ನಡೆಸಿದೆ. ಯಾವ ದಿನದಿಂದ ಕಾರ್ಯಕ್ರಮ ಆರಂಭಿಸಬೇಕು ಎಂಬ ಬಗ್ಗೆ ಕಾಲೇಜುಗಳ ಪ್ರಾಂಶುಪಾಲರಿಂದ ಮಾಹಿತಿ ಕೇಳಿದೆ.

ಪ್ರಾಂಶುಪಾಲರು, ಪ್ರಾಧ್ಯಾಪಕರಿಗೆ ತರಬೇತಿ: ಈ ಕಾರ್ಯಕ್ರಮ ಸಮರ್ಪಕ ಅನುಷ್ಠಾನಕ್ಕಾಗಿ ಈಗಾಗಲೇ ಕಾಲೇಜು ಶಿಕ್ಷಣ ಇಲಾಖೆ ಮೊದಲ ಬ್ಯಾಚ್‌ನ ತರಬೇತಿ ಮುಗಿಸಿದೆ. ಆಯ್ದ ಸರಕಾರಿ ಪದವಿ ಕಾಲೇಜುಗಳ ಪ್ರಾಂಶುಪಾಲರು ಹಾಗೂ ಪ್ರಾಧ್ಯಾಪಕರಿಗೆ ಚಟುವಟಿಕೆ ಆಧಾರಿತ ಬೋಧನೆ, ಅಭ್ಯಾಸ ಪುಸ್ತಕಗಳ ಬಳಕೆ ಸೇರಿ ಹಲವು ವಿಷಯಗಳ ಬಗ್ಗೆ ತರಬೇತಿ ಕೊಡಲಾಗಿದೆ. ಅವರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಲಿದ್ದಾರೆ.

ವಿಕ ಕಚೇರಿಯಲ್ಲಿ ಮಳೆ ಕವಿಗೋಷ್ಠಿ

ಇಂದು ಮಳೆರಾಗ

ಬೆಂಗಳೂರು: ವಿಜಯ ಕರ್ನಾಟಕದ ಬೆಂಗಳೂರು ಕಚೇರಿಯಲ್ಲಿ ಆ.8ರ ಶನಿವಾರ ಸಂಜೆ 4 ಗಂಟೆಗೆ 'ಮಳೆರಾಗ' ವಿಶಿಷ್ಟ ಪರಿಕಲ್ಪನೆಯ ಕವಿಗೋಷ್ಠಿ ನಡೆಯಲಿದೆ. ವಿಜಯ ಕರ್ನಾಟಕ ಹಾಗೂ ವಿನಾಯಕ ಗೋಕಾಕ್ ವಾಗ್ಮಯ ಟ್ರಸ್ಟ್ ಸಹಯೋಗದಲ್ಲಿ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ಕನ್ನಡದ ಹೆಸರಾಂತ ಕವಿಗಳು ಕವನಗಳನ್ನು ಪ್ರಸ್ತುತಪಡಿಸಲಿದ್ದಾರೆ.

ಆಗಸ್ಟ್ 9ರಂದು ಜ್ಞಾನಪೀಠ ಪುರಸ್ಕೃತ ಸಾಹಿತಿ ವಿ.ಕೃ.ಗೋಕಾಕರ ಜನ್ಮದಿನವಾಗಿದ್ದು, ಆ ನೆಪದಲ್ಲಿ ಶನಿವಾರದಂದು ಮಳೆಯ ಕುರಿತ ಕವನಗಳ ವಾಚನದ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಕವಿಗಳಾದ ಪ್ರತಿಭಾ ನಂದಕುಮಾರ್, ಎಂ.ಆರ್.ಕಮಲಾ, ಸುಬ್ಬು ಹೊಲೆಯಾರ್, ಜಿ.ಎನ್.ಮೋಹನ್, ನೂತನ ದೋಶೆಟ್ಟಿ, ಸಂಧ್ಯಾರಾಣಿ, ಚಾಂದ್ ಪಾಶಾ, ದಾದಾಪೀರ್ ಜೈಮನ್, ವಿನಾಯಕ ಅರಳಸುರಳಿ, ದೀಕ್ಷಿತ್ ನಾಯರ್ ತಮ್ಮ ಸ್ವರಚಿತ ಮಳೆ ಕವನದೊಂದಿಗೆ ಕನ್ನಡ ಸಾಹಿತ್ಯದಲ್ಲಿ ಈ ಹಿಂದೆ ಕುವೆಂಪು, ಪಂಜೆ ಮಂಗೇಶರಾವ್, ಯು.ಆರ್. ಅನಂತಮೂರ್ತಿ, ಕೆ.ವಿ.ತಿರುಮಲೇಶ್, ಕಂಬಾರ ಮೊದಲಾದವರು ಬರೆದ ಮಳೆ ಕವನಗಳನ್ನು ವಾಚಿಸಲಿದ್ದಾರೆ. ಹಿರಿಯ ವಿಮರ್ಶಕ ನರಹಳ್ಳಿ ಬಾಲಸುಬ್ರಹ್ಮಣ್ಯ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಲಿದ್ದಾರೆ.

ಬಿಜೆಪಿ- ಜೆಡಿಎಸ್ ನಾಯಕರ ಸಭೆ ಇಂದು

ಬೆಂಗಳೂರು: ಬಿಜೆಪಿ- ಜೆಡಿಎಸ್ ನಾಯಕರು ಶನಿವಾರ ಸಮನ್ವಯ ಸಭೆ ನಡೆಸಲಿದ್ದು, ಮುಂಬರುವ ವಿಧಾನ ಮಂಡಲ ಅಧಿವೇಶನದಲ್ಲಿ ಉಭಯ ಪಕ್ಷಗಳು ಸಮನ್ವಯದಿಂದ ಮುಂದುವರಿಯುವ ಬಗ್ಗೆ ಚರ್ಚೆ ನಡೆಸಲಿದ್ದಾರೆ. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ನೇತೃತ್ವದಲ್ಲಿ ಜೆಡಿಎಸ್, ಬಿಜೆಪಿ ನಾಯಕರ ಸಭೆ ನಗರದ ಹೋಟೆಲ್‌ನಲ್ಲಿ ನಡೆಯಲಿದೆ. ರಾಜ್ಯ ಸರಕಾರದ ವೈಫಲ್ಯಗಳ ವಿರುದ್ಧ ಸದನದಲ್ಲಿ ಹೋರಾಡಲು ಅನುಸರಿಸಬೇಕಾದ ಕಾರ್ಯತಂತ್ರ ಕುರಿತು ಚರ್ಚೆ ನಡೆಯಲಿದೆ.

ಆಯ್ಕೆ ದಾಖಲಿಸಲು ಆ.13ರವರೆಗೆ ಅವಕಾಶ

■ **ವಿಕ ಸುದ್ದಿಲೋಕ** ಬೆಂಗಳೂರು

ವೈದ್ಯಕೀಯ, ದಂತ ವೈದ್ಯಕೀಯ ಮತ್ತು ಫಾರ್ಮಸಿ ಕೋರ್ಸ್‌ಗಳ ಪ್ರವೇಶಕ್ಕೆ ಇಚ್ಛೆ/ ಆಯ್ಕೆ ದಾಖಲಿಸುವ ಪ್ರಕ್ರಿಯೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಶುಕ್ರವಾರದಿಂದ ಆರಂಭಿಸಿದೆ.

ಎಂಜಿನಿಯರಿಂಗ್ ಇತ್ಯಾದಿ ಸಿಇಟಿ ಕೋರ್ಸ್‌ಗಳ ಪ್ರವೇಶಕ್ಕೆ ಆಪ್ಷನ್ ದಾಖಲಿಸಿದ್ದ ಅಭ್ಯರ್ಥಿಗಳು ಕೂಡ ಈಗ ಹೊಸದಾಗಿ ಆಪ್ಷನ್ ದಾಖಲಿಸಲು, ಮಾರ್ಪಡಿಸಲು ಅಥವಾ ತೆಗೆದು ಹಾಕಲು ಇದೇ ಮೊದಲ ಬಾರಿಗೆ ಅವಕಾಶ ನೀಡಲಾಗಿದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

ಆದ್ಯತಾ ಕ್ರಮದಲ್ಲಿ ಆ.13ರವರೆಗೆ ಆಪ್ಷನ್ ದಾಖಲಿಸಲು ಅವಕಾಶ ನೀಡಲಾಗಿದೆ. ವೈದ್ಯಕೀಯ, ದಂತ ವೈದ್ಯಕೀಯ ಮತ್ತು ಫಾರ್ಮಸಿ ಕೋರ್ಸ್‌ಗಳ ಸೀಟ್ ಮ್ಯಾಟ್ರಿಕ್ಸ್ ಮತ್ತು ಶುಲ್ಕದ ವಿವರಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ್ದು, ಅದನ್ನು ನೋಡಿಯೇ ಎಚ್ಚರಿಕೆಯಿಂದ ಆಪ್ಷನ್ ದಾಖಲಿಸಬೇಕು ಎಂದು ಅವರು ಸಲಹೆ ನೀಡಿದ್ದಾರೆ.

ವೈದ್ಯಕೀಯ ಕೋರ್ಸ್ ಮೊದಲ ಸುತ್ತಿನ ಮತ್ತು ಎಂಜಿನಿಯರಿಂಗ್ ಇತ್ಯಾದಿ ಸಿಇಟಿ ಕೋರ್ಸ್‌ಗಳ ಎರಡನೇ ಸುತ್ತಿನ ವಿಕಲಾಂಗರಲ್ಲಿ ಸೀಟು ಹಂಚಿಕೆ ಮಾಡುತ್ತಿದ್ದು, ತಾತ್ಕಾಲಿಕ ಫಲಿತಾಂಶವನ್ನು ಆ.19ರಂದು ಬೆಳಗ್ಗೆ 10ಕ್ಕೆ ಪ್ರಕಟಿಸಲಾಗುವುದು. ಯುಜಿ ನೀಟ್ ಕೋರ್ಸ್‌ಗಳಿಗೆ ಮೊದಲನೇ ಸುತ್ತಿನ ಸೀಟು ಹಂಚಿಕೆಯಾಗಿರುವ ಕಾರಣ ನಾಲ್ಕು ಚಾಯ್ಸ್‌ಗಳು ಇರುತ್ತವೆ. ಆದರೆ, ಎಂಜಿನಿಯರಿಂಗ್, ಕೃಷಿ ವಿಜ್ಞಾನ, ಫಾರ್ಮಸಿ ಇತ್ಯಾದಿ ಯುಜಿ-ಸಿಇಟಿ ಕೋರ್ಸ್‌ಗಳಿಗೆ ಎರಡನೇ ಸುತ್ತಿನ ಸೀಟು ಹಂಚಿಕೆಯ ಫಲಿತಾಂಶದ ನಂತರ ಚಾಯ್ಸ್- 1 ಮತ್ತು ಚಾಯ್ಸ್- 4 ಮಾತ್ರ ಆಯ್ಕೆಗೆ ಅವಕಾಶ ಇರುತ್ತದೆ. 3ನೇ ಸುತ್ತಿನ ಸೀಟು ಹಂಚಿಕೆಗೆ ಕೆಲವು ಷರತ್ತುಗಳ ಅನ್ವಯ ಭಾಗವಹಿಸಲು ಅವಕಾಶ ನೀಡಲಾಗುವುದು ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಆಯುಷ್ ಕೋರ್ಸ್‌ಗಳಿಗೆ ಸೀಟ್ ಮ್ಯಾಟ್ರಿಕ್ಸ್ ಬಂದಿಲ್ಲ. ಹೀಗಾಗಿ, ಆಪ್ಷನ್ ದಾಖಲಿಸಲು ಅವಕಾಶ ನೀಡಿಲ್ಲ ಎಂದು ತಿಳಿಸಿದ್ದಾರೆ.

ಇದುವರೆಗೂ ದಾಖಲೆಗಳನ್ನು ಪರಿಶೀಲನೆ ಮಾಡಿಸಿಕೊಳ್ಳದಿರುವ ಅಭ್ಯರ್ಥಿಗಳು ಶನಿವಾರ ಕೆಇಎ ಕಚೇರಿಗೆ ಬಂದು ಪರಿಶೀಲನೆ ಮಾಡಿಸಿಕೊಳ್ಳಬಹುದು. ಆದರೆ ನಂತರದ ವೆರಿಫಿಕೇಷನ್ ಸ್ಲಿಪ್ ಡೌನ್‌ಲೋಡ್ ಮಾಡಿಕೊಂಡು ಆಪ್ಷನ್ ದಾಖಲಿಸಿಕೊಳ್ಳಬಹುದಾಗಿದೆ. ಚಾಯ್ಸ್-4 ದಾಖಲಿಸಿ ಪ್ರಕ್ರಿಯೆಯಿಂದ ಹೊರ ನಡೆದಿರುವ ಹಾಗೂ ಮೊದಲ ಸುತ್ತಿನಲ್ಲಿ ಸೀಟು ಹಂಚಿಕೆಯಾದ ಮೇಲೂ ಚಾಯ್ಸ್ ದಾಖಲಿಸದೆ ಇರುವ ಅಭ್ಯರ್ಥಿಗಳು ಕೂಡ 750 ರೂ. ಪಾವತಿಸಿ ಪುನಃ ಪ್ರಕ್ರಿಯೆಯೊಳಗೆ ಬರುವುದಕ್ಕೆ ಅವಕಾಶ ನೀಡಲಾಗಿದೆ ಎಂದು ಎಚ್.ಪ್ರಸನ್ನ ತಿಳಿಸಿದ್ದಾರೆ.

ಹೈಕೋರ್ಟ್‌ಗೆ ಆರು ನೂತನ ನ್ಯಾಯಮೂರ್ತಿಗಳ ನೇಮಕ

ಬೆಂಗಳೂರು: ಕರ್ನಾಟಕ ಹೈಕೋರ್ಟ್‌ಗೆ ಆರು ಮಂದಿ ಹೆಚ್ಚುವರಿ ನ್ಯಾಯಮೂರ್ತಿಗಳನ್ನು ನೇಮಕ ಮಾಡಿ ಕೇಂದ್ರ ಕಾನೂನು ಮತ್ತು ನ್ಯಾಯ ಸಚಿವಾಲಯ ಶುಕ್ರವಾರ ಆದೇಶ ಹೊರಡಿಸಿದೆ.

ವಕೀಲರಾದ ರಾಘವೇಂದ್ರ, ಸೀತಾರಾಮ ಶ್ರೀವತ್ಸ, ಹೇಮಾ ಕುಲಕರ್ಣಿ, ಸುಬ್ರಹ್ಮಣ್ಯ ರಂಗರಾವ್, ಧಡಗವಾಡಿ ಪ್ರಕಾಶ್ ವಿವೇಕಾನಂದ, ಚಕ್ಕೆರೆ ಪ್ರದೋಷ್ ಮತ್ತು ಹೊಂಬೇಗೌಡ ಶಾಂತಿಭೂಷಣ್ ಅವರನ್ನು ನೇಮಕ ಮಾಡಿ ರಾಷ್ಟ್ರಪತಿಗಳ ಆದೇಶದ ಮೇರೆಗೆ ಕೇಂದ್ರ ಕಾನೂನು ಮತ್ತು ನ್ಯಾಯ ಇಲಾಖೆಯ ಜಂಟಿ ಕಾರ್ಯದರ್ಶಿ ಆದೇಶ ಹೊರಡಿಸಿದ್ದಾರೆ.

ನೇಮಕಗೊಂಡಿರುವ ಈ ಆರು ನ್ಯಾಯಮೂರ್ತಿಗಳು ತಾವು ಅಧಿಕಾರ ವಹಿಸಿಕೊಳ್ಳುವ ದಿನಾಂಕದಿಂದ 2 ವರ್ಷಗಳ ಅವಧಿಗೆ ಹೆಚ್ಚುವರಿ ನ್ಯಾಯಮೂರ್ತಿಗಳ ಹುದ್ದೆಯಲ್ಲಿ ಮುಂದುವರಿಯಲಿದ್ದಾರೆ.

ಹೈಕೋರ್ಟ್‌ನ ಬೆಂಗಳೂರು, ಧಾರವಾಡ ಮತ್ತು ಕಲಬುರಗಿ ಪೀಠಗಳಿಗೆ 62 ನ್ಯಾಯಮೂರ್ತಿಗಳ ಹುದ್ದೆ ಮಂಜೂರಾಗಿದ್ದು, ಸದ್ಯ 48 ನ್ಯಾಯಮೂರ್ತಿಗಳು ಸೇವೆ ಸಲ್ಲಿಸುತ್ತಿದ್ದಾರೆ. ಈ ಆರು ನ್ಯಾಯಮೂರ್ತಿಗಳ ನೇಮಕದಿಂದ ನ್ಯಾಯಮೂರ್ತಿಗಳ ಸಂಖ್ಯೆ 54ಕ್ಕೆ ಏರಿಕೆಯಾಗಲಿದೆ.

ದರ್ಶನ್ ಕೇಸ್‌ನ ಜೆರಾಕ್ಸ್ ಡಾಕ್ಯುಮೆಂಟರಿ

ಬಾಸ್

ನಟ ದರ್ಶನ್ ಆರೋಪಿತ ಕೊಲೆ ಕೇಸ್‌ನ ಹೋಲುವ ಕಥೆ, ಈ ಸಿನಿಮಾದ ನಾಯಕ ತನುಶ್ ಅಲಿಯಾಸ್ ಬಾಸ್ ಒಬ್ಬ ಜನಪ್ರಿಯ ಕ್ರಿಕೆಟ್ ಆಟಗಾರ. ಮದುವೆಯಾಗಿರುವ ಬಾಸ್‌ಗೆ ಶೀಲಾ ಗೌಡ ಎಂಬ ಗರ್ಲ್ ಫ್ರೆಂಡ್. ಈ ಗರ್ಲ್ ಫ್ರೆಂಡ್‌ಗೆ ಸೋಷಿಯಲ್ ಮೀಡಿಯಾದಲ್ಲಿ ರೇಗಿಸೋ ಕಾಮುಕ ಶಿವಸ್ವಾಮಿಯನ್ನು ಹಾಸನದಿಂದ ಕರೆತಂದ ಬಾಸ್ ಅಭಿಮಾನಿ ಸಂಘದ ಸದಸ್ಯರು ಹಾಗೂ ಶೀಲಾಗೌಡ ಹುಡುಗರು, ಆತನಿಗೆ ಬುದ್ಧಿ ಹೇಳುವ ಬದಲು ಕೊಲೆ ಮಾಡುತ್ತಾರೆ. ಇಲ್ಲಿಂದ ಮುಂದೆ ಏನಾಗುತ್ತದೆ, ಇಲ್ಲಿಯವರೆಗೂ ಏನಾಗಿದೆ ಎಂಬುದು ದೇಶವ್ಯಾಪಿ ಪ್ರತಿದಿನ ಅಪ್ಡೇಟ್ ಆಗುತ್ತಲೇ ಇದೆ. ಜಗತ್ತಿಗೆ ಗೊತ್ತಿರುವ ಈ ಕಥೆಯನ್ನು ಒಂದು ಕಮರ್ಷಿಯಲ್ ಡಾಕ್ಯುಮೆಂಟರಿ ರೂಪದಲ್ಲಿ ತೆರೆಗೆ ಇಟ್ಟಿದ್ದಾರೆ ನಿರ್ದೇಶಕ ಲವ. ತಿಂಗಳುಗಟ್ಟಲೆ ಮಾಧ್ಯಮಗಳಲ್ಲಿ ಸದ್ದು ಮಾಡಿದ, ಈಗಲೂ ಸದ್ದು ಮಾಡುತ್ತಿರುವ ಸ್ಟೋರಿಯಲ್ಲಿ ಬಾಸ್ ಅರೆಸ್ಟ್ ಆಗುವವರೆಗಿನ ಸ್ಟೋರಿಯನ್ನು ತೆರೆಗೆ

ಇಟ್ಟಿದ್ದಾರೆ. ಓದಿದ, ಕೇಳಿದ, ಊಹಿಸಿಕೊಂಡ ಕಥೆಯನ್ನು ಅದರದ್ದೇ ಜೆರಾಕ್ಸ್ ಕಾಪಿ ಎನ್ನುವಂತೆ ಸೃಷ್ಟಿಸಿ ಸಿನಿಮಾ ಮಾಡಿದ್ದಾರೆ ನಿರ್ದೇಶಕರು.

ಬಾಸ್ ಪಾತ್ರದಲ್ಲಿ ತನುಶ್ ಶಿವಣ್ಣ ನಟನೆ ಹಾಗೂ ಶೀಲಾ ಗೌಡ ಪಾತ್ರದಲ್ಲಿ ಮೋನಿಕಾ ಅವರ ನಟನೆ ಎಷ್ಟು ನೈಜವಾಗಿದೆ ಎಂದರೆ ನಿಜ ಕೇಸ್‌ನ ದರ್ಶನ್ ಹಾಗೂ ಪವಿತ್ರ ಗೌಡ ಮರೆತು ಹೋಗಿ ಇವರೇ ಮನದಲ್ಲಿ ಉಳಿಯುತ್ತಾರೆ. ಈಗಲೂ ಬಿಸಿಬಿಸಿ ಚರ್ಚೆಯಾಗಿ ಉಳಿದಿರುವ ವಿಷಯವನ್ನು ಸಿನಿಮಾ ಮಾಡಿರುವ ಪ್ರಯತ್ನ ಬಹುಭಾಷೆಗಳಲ್ಲಾಗಿದ್ದರೂ ಇದು ಡಿಫರೆಂಟ್. ಇಲ್ಲಿ ಬಾಸ್‌ನ ಇನ್ನೊಂದು ಮುಖದ ಪರಿಚಯ ಮಾಡಿಸುವ ಜತೆಗೆ ಅವರ ಭವಿಷ್ಯ ಹೇಗಿರುತ್ತೆ ಎನ್ನುವುದನ್ನು ಕ್ಲೈಮ್ಯಾಕ್ಸ್‌ನಲ್ಲಿ ತಿಳಿಸಿದ್ದಾರೆ. ಯಾರೇನು ಆದರೂ, ಎಷ್ಟೇ ದೊಡ್ಡವರಾದರೂ, ಹಣ ಉಳ್ಳವರಾದರೂ, ಕಾನೂನಿನ ಮುಂದೆ ಎಲ್ಲರೂ ಒಂದೇ ಎನ್ನುವ ಸಂದೇಶವನ್ನು ಸಿನಿಮಾದಲ್ಲಿ ಅಚ್ಚುಕಟ್ಟಾಗಿ ಜನರಿಗೆ ಮುಟ್ಟಿಸಿದ್ದಾರೆ. ನಟ ದರ್ಶನ್ ಕೇಸ್‌ನ ಕೇಳಿ ಎಂಜಾಯ್ ಮಾಡಿರುವ ಜನರಿಗೆ ಅದೇ ತರಹದ ಕಥೆಯನ್ನು ಹೇಳಿರುವ ಸಿನಿಮಾ ಅಷ್ಟೇ ರೋಚಕವಾಗಿ ಎಂಟರ್‌ಟೈನ್ ಮಾಡುತ್ತೆ. ಈ ಸ್ಟೋರಿ ನಮಗೆ ಗೊತ್ತಿದೆ, ಇದರ ಹೊರತಾಗಿಯೂ ನಮ್ಮ ಬಳಿ ಮಾಹಿತಿ ಇದೆ ಎನ್ನುವವರೂ ಸೀಟ್ ತುದಿಗೆ ಕೂರಿಸುವ ಸಿನಿಮಾ.

- ಕಿರಣ್ ಚಂದ್ರ

ತಾರಾಗಣ: ತನುಶ್ ಶಿವಣ್ಣ, ಮೋನಿಕಾ ಗೌಡ, ಪಾಯಲ್ ಚಂಗಪ್ಪ, ಸಂದೀಪ್ ನೀನಾಸಂ, **ನಿರ್ದೇಶನ:** ಲವ
ಸಂಗೀತ ನಿರ್ದೇಶನ: ಡ್ಯಾವಿ ಸುರೇಶ್
ಛಾಯಾಗ್ರಹಣ: ಶರತ್ ಎನ್‌ಆರ್ ಪುರ
ರೇಟಿಂಗ್ : ★★★

ಹಿರಿಯ ಸಾಹಿತಿ ಟಿ.ಎಲ್. ಸುಬ್ರಹ್ಮಣ್ಯ ಅಡಿಗ ನಿಧನ

ತೀರ್ಥಹಳ್ಳಿ (ಶಿವಮೊಗ್ಗ): ಹಿರಿಯ ಸಾಹಿತಿ, ತಾಲೂಕಿನ ಅರಳಸುರುಳಿ ಟಿ.ಎಲ್.ಸುಬ್ರಹ್ಮಣ್ಯ ಅಡಿಗ (90) ಶುಕ್ರವಾರ ಸಂಜೆ ಪಟ್ಟಣದ ಸರಕಾರಿ ಜೆಸಿ ಆಸ್ಪತ್ರೆಯಲ್ಲಿ ನಿಧನರಾದರು. ಅಡಿಗರು ಕಥೆ, ಕವನ, ಕಾದಂಬರಿಗಳು ಸೇರಿದಂತೆ 100ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ತೀರ್ಥಹಳ್ಳಿ ತಾಲೂಕು 8ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು. ಅವರಿಗೆ ಒಬ್ಬ ಪುತ್ರ, ಇಬ್ಬರು ಪುತ್ರಿಯರು ಇದ್ದಾರೆ. ಅಡಿಗ ಅವರ ನಿಧನಕ್ಕೆ ಮಾಜಿ ಸಚಿವ ಕಿಮ್ಮನೆ ರತ್ನಾಕರ್, ಜಿಲ್ಲಾ ಕಸಾಪ ಅಧ್ಯಕ್ಷ ಡಿ.ಮಂಜುನಾಥ್, ತಾಲೂಕು ಕಸಾಪ ಅಧ್ಯಕ್ಷ ಟಿ.ಕೆ. ರಮೇಶಶೆಟ್ಟಿ ಸಂತಾಪ ವ್ಯಕ್ತಪಡಿಸಿದ್ದಾರೆ.



ನೇಹಾ ಬೋರಾ ಮೇಲೆ ಮಸಿ ಎರಚಿದ ದುಷ್ಕರ್ಮಿ

ರಾಂಚಿ: ನೇಮಕಾತಿ ಪರೀಕ್ಷೆಗಳಲ್ಲಿನ ಅಕ್ರಮದ ವಿರುದ್ಧ ಜಾರ್ಖಂಡ್‌ನಲ್ಲಿ ನಡೆಯುತ್ತಿರುವ ವಿದ್ಯಾರ್ಥಿಗಳ ಪ್ರತಿಭಟನೆಯ ಕಾವು ಇನ್ನೂ ನಿಂತಿಲ್ಲ, ರಾಂಚಿಯಲ್ಲಿ ವಿದ್ಯಾರ್ಥಿಗಳು ಶುಕ್ರವಾರ ನಡೆಸಿದ ಪ್ರತಿಭಟನಾ ಮೆರವಣಿಗೆ ವೇಳೆ ಅಖಿಲ ಭಾರತ ವಿದ್ಯಾರ್ಥಿಗಳ ಒಕ್ಕೂಟದ (ಎಐಎಸ್‌ಎ) ಅಧ್ಯಕ್ಷೆ ನೇಹಾ ಬೋರಾ ಅವರ ಮೇಲೆ ಮಸಿ ಎರಚಲಾಗಿದೆ. ವಿಧಾನಸಭೆಯತ್ತ ಪ್ರತಿಭಟನಾ ಮೆರವಣಿಗೆ ಸಾಗುತ್ತಿದ್ದ ವೇಳೆ ಬೋರಾ ಅವರ ಮೇಲೆ ಈ ಕೃತ್ಯ ಎಸಲಾಗಿದ್ದು, ಸ್ಥಳದಲ್ಲಿ ಕೆಲಕಾಲ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು. ನಂತರ ಪರಿಸ್ಥಿತಿ ತಿಳಿಗೊಂಡಿದೆ.

ನೇಹಾ ಅವರನ್ನು ದೇಶದ್ರೋಹಿ ಎಂದು ಕರೆದ ಆರೋಪಿ ಅಮರನಾಥ್ ಪಾಂಡೆ ಈ ಕೃತ್ಯ ಎಸಗಿದ್ದು, ಆತನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ''ಎಐಎಸ್‌ಎ, ಆಡಳಿತಾರೂಢ ಜಾರ್ಖಂಡ್ ಮುಕ್ತಿ ಮೋರ್ಚಾದ ಮಿತ್ರಪಕ್ಷವಾಗಿರುವ ಸಿಪಿಐ (ಎಂಎಲ್) ಲಿಬರೇಷನ್ ಪಕ್ಷದ ವಿದ್ಯಾರ್ಥಿ ಘಟಕವಾಗಿದ್ದು, ಇದೊಂದು ನಾಟಕ,'' ಎಂದು ಪ್ರತಿಪಕ್ಷ ಬಿಜೆಪಿ ಜರಿದಿದೆ.

ಘಟನೆ ಕುರಿತು ಪ್ರಕ್ರಿಯಿಸಿರುವ ನೇಹಾ ಬೋರಾ ಅವರು, ''ದಿಲ್ಲಿಯಲ್ಲಿ ಕಾಕ್ರೋಚ್ ಜನತಾ ಪಕ್ಷದ ನೇತೃತ್ವದಲ್ಲಿ ನಡೆದ ಪ್ರತಿಭಟನೆ ವೇಳೆ ನಾನು ಪೆಲೆಟ್ ಗನ್ ದಾಳಿ ಹಾಗೂ ಲಾಠಿ ಪ್ರಹಾರ ಎದುರಿಸಿದ್ದೇನೆ. ಹೀಗಾಗಿ, ಮಸಿ ಎರಚಿದ ಮಾತ್ರಕ್ಕೆ ನಾನು ಧೃತಿಗೆಡುವುದಿಲ್ಲ. ಯುವಕರ ಆಕ್ರೋಶವನ್ನು ಮಸಿ ಎರಚುವುದರಿಂದ ಹತ್ತಿಕ್ಕಲಾಗದು,'' ಎಂದಿದ್ದಾರೆ.

ಭಾರತಕ್ಕೆ 100% ಸುಂಕ: ಅಮೆರಿಕ ಸಂಸದರಿಂದಲೇ ವಿರೋಧ

ವಾಷಿಂಗ್ಟನ್: ರಷ್ಯಾದಿಂದ ತೈಲ ಖರೀದಿಸಿದ್ದಕ್ಕೆ ಭಾರತದ ಮೇಲೆ ಶೇ.100ರಷ್ಟು ಸುಂಕ ವಿಧಿಸುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತದ ಕ್ರಮಕ್ಕೆ ಸಂಸದರೇ ವಿರೋಧ ವ್ಯಕ್ತಪಡಿಸಿದ್ದಾರೆ.

ಅಮೆರಿಕ ಸಂಸತ್ ಮೇಲ್ಮನೆ ಸೆನೆಟ್‌ನಲ್ಲಿ ರಷ್ಯಾ ತೈಲದ ಮೇಲೆ ನಿರ್ಬಂಧ ಕುರಿತು ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಡೆಮಾಕ್ರಟಿಕ್ ಸಂಸದ ರಾಬ್ ವೈಡನ್, ರಿಪಬ್ಲಿಕನ್ ಸಂಸದ ರಾಂಡ್ ಪಾಲ್ ಅವರು, ''ಭಾರತ, ಚೀನಾ ಸರಕುಗಳ ಮೇಲೆ ಶೇ.100ರಷ್ಟು ಸುಂಕ ವಿಧಿಸುವ ಪ್ರಸ್ತಾಪ ಅಮೆರಿಕ ತನ್ನ ಕಾಲ ಮೇಲೆ ತಾನೆ ಕಲ್ಲು ಹಾಕಿಕೊಂಡಂತಾಗುತ್ತದೆ,'' ಎಂದು ಟೀಕಿಸಿದರು. ''ಹೆಚ್ಚುವರಿ ಸುಂಕದ ಪ್ರಸ್ತಾವನೆ ಅಮೆರಿಕ 'ತನ್ನ ಕಾಲಿಗೆ ತಾನೇ ಗುಂಡು ಹೊಡೆದುಕೊಳ್ಳುವ' ಕ್ರಮಕ್ಕೆ ಸಮಾನವಾಗಿದೆ. ಇಂತಹ ಸುಂಕಗಳನ್ನು ವಿಧಿಸುವುದು ಭಾರತದೊಂದಿಗಿನ ಅಮೆರಿಕದ ಸಂಬಂಧವನ್ನು ಅಸ್ಥಿರಗೊಳಿಸುತ್ತದೆ,'' ಎಂದು ಪಾಲ್ ಬಣ್ಣಿಸಿದರು. ಪಾಲ್ ನಿಲುವನ್ನು ಬೆಂಬಲಿಸಿದ ಸೆನೆಟರ್ ವೈಡನ್ ಕೂಡ, ಹೊಸ ಸುಂಕದ ನಿಬಂಧನೆಗಳಿಗೆ ವಿರೋಧ ವ್ಯಕ್ತಪಡಿಸಿದರು.

ರಷ್ಯಾ ತೈಲ ಖರೀದಿಸುವ ಭಾರತ, ಚೀನಾ ಸೇರಿದಂತೆ ನಾಲ್ಕು ದೇಶಗಳ ಸರಕುಗಳ ಮೇಲೆ ಶೇ.100ರಷ್ಟು ಸುಂಕ ವಿಧಿಸುವ ವಿಧೇಯಕವನ್ನು ಜುಲೈ 28ರಂದು ಸಂಸತ್‌ನಲ್ಲಿ ಮಂಡಿಸಲಾಗಿತ್ತು. ವಿಧೇಯಕ ಅಂಗೀಕಾರವಾದಲ್ಲಿ ರಷ್ಯಾದಿಂದ ಇಂಧನ ಆಮದು ಮಾಡಿಕೊಳ್ಳುವ ದೇಶಗಳ ಮೇಲೆ ಅಮೆರಿಕದ ತೆರಿಗೆ ಹೊರೆ ಹೆಚ್ಚಲಿದೆ.

ಇಂದು ಕೆಲ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದ ಕರಾವಳಿ ಹಾಗೂ ಮಲೆನಾಡು ಭಾಗದಲ್ಲಿ ಮುಂಗಾರು ಚುರುಕುಗೊಂಡಿದ್ದು, ಆ.13ರವರೆಗೆ ರಾಜ್ಯದ ಹಲವೆಡೆ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

13ರವರೆಗೆ ರಾಜ್ಯದಲ್ಲಿ ಮಳೆ ಅಬ್ಬರ



ಉಡುಪಿ, ಕೊಡಗು, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದ್ದು, ಈ ಜಿಲ್ಲೆಗಳಿಗೆ ಆ.8ರಂದು ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಕರಾವಳಿ ಜಿಲ್ಲೆಗಳಲ್ಲಿ ಒಂದು ವಾರ ಮಳೆ ಹೆಚ್ಚಾಗಲಿದ್ದು, ಆ.13ರ ಬಳಿಕ ಕಡಿಮೆಯಾಗುವ ಸೂಚನೆಯಿದೆ.

ಕೊಡಗು, ಬಳ್ಳಾರಿ, ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಾಮರಾಜನಗರ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗುವ ನಿರೀಕ್ಷೆಯಿದ್ದು, ದಾವಣಗೆರೆ, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ತುಮಕೂರು ಜಿಲ್ಲೆಗಳಲ್ಲೂ ಮಳೆಯಾಗುವ ಸೂಚನೆ ನೀಡಲಾಗಿದೆ.

ಗಂಟೆಗೆ 30 ರಿಂದ 40 ಕಿ.ಮೀ. ವೇಗದಲ್ಲಿ ಗಾಳಿ ಬೀಸಲಿದ್ದು, ಬೆಂಗಳೂರಿನಲ್ಲಿ ಮುಂದಿನ ನಾಲ್ಕು ದಿನಗಳ ಕಾಲ ಹಗುರದಿಂದ ಸಾಧಾರಣ ಮಳೆಯಾಗುವ ನಿರೀಕ್ಷೆಯಿದೆ. ಕರಾವಳಿ ಭಾಗದಲ್ಲಿ ಮಳೆ ಪ್ರಮಾಣ ಹೆಚ್ಚಾಗಿರಲಿದ್ದು, ಭಾರಿ ಮಳೆಯ ಮುನ್ಸೂಚನೆಯಿರುವ ಜಿಲ್ಲೆಗಳಲ್ಲಿ ಜನರು ಎಚ್ಚರ ವಹಿಸುವಂತೆ ಹವಾಮಾನ ತಜ್ಞರು ಸಲಹೆ ನೀಡಿದ್ದಾರೆ.